## 2. "ಶೌರ್ಯ" ವಿಪತ್ತು ನಿರ್ವಹಣಾ ಕಾರ್ಯಕ್ರಮ:

ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ವಿಶೇಷ ಕಾಳಜಿಯಿಂದ ಜೂನ್ 22, 2020ರಂದು ಪ್ರಾರಂಭಿಸಲಾದ ವಿನೂತನ ಕಾರ್ಯಕ್ರಮವೇ 'ಶೌರ್ಯ' ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಕಾರ್ಯಕ್ರಮ'.




ಕರ್ನಾಟಕ ರಾಜ್ಯದಲ್ಲಿ ಸುಮಾರು 55 ತಾಲೂಕುಗಳು ವಿಪತ್ತಿಗೆ ಕಾರಣವಾಗುವ ಪ್ರದೇಶಗಳೆಂದು ಸರಕಾರವು ಗುರುತಿಸಿದೆ. ಹೆಚ್ಚಿನ ಪ್ರಾಕೃತಿಕ ವಿಕೋಪಗಳು ವಿಪರೀತ ಗಾಳಿ, ಮಳೆಯ ಕಾರಣಕ್ಕಾಗಿಯೇ ಸಂಭವಿಸುತ್ತಿರುವುದನ್ನು ಗಮನಿಸಲಾಗಿದೆ. ಭೂಕುಸಿತ, ಪ್ರವಾಹ, ದುರಂತ ಅಪಘಾತಗಳು ಸಂಭವಿಸಿದಾಗ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಅಗ್ನಿಶಾಮಕದಳ, ಪೊಲೀಸ್ ಇಲಾಖೆ, ಗೃಹರಕ್ಷಕದಳ, ಆರೋಗ್ಯ ಇಲಾಖೆಯಿಂದ ತುರ್ತು ಗಮನ ಮತ್ತು ಸೇವೆ ಲಭ್ಯವಾಗುತ್ತಿದ್ದರೂ ವಿಪತ್ತಿನ ಪರಿಣಾಮಕ್ಕೆ ಈ ವ್ಯವಸ್ಥೆಯಿಂದ ಕಾರ್ಯಾಚರಣೆಯನ್ನು ನಿರ್ವಹಿಸಲು ಕಷ್ಟ ಸಾಧ್ಯವಾಗುತ್ತಿರುವುದರಿಂದ ಬಹುತೇಕ ವಿಪತ್ತು ಪೀಡಿತ ಪ್ರದೇಶದ ಜನರು ಸಾವು, ನೋವು, ನಷ್ಟಕ್ಕೆ ಒಳಗಾಗುವುದನ್ನು ಗಮನಿಸಿದಾಗ ಇಂತಹ ವ್ಯವಸ್ಥೆಯೊಂದಿಗೆ ಸ್ಥಳೀಯ ಪರಿಸರ, ಸೂಕ್ಷ್ಮ ಪ್ರದೇಶ, ವಿಪತ್ತು ಪರಿಹಾರಕ್ಕೆ ಪೂರಕವಾದ ವ್ಯವಸ್ಥೆ, ಸ್ಥಳೀಯ ಭೌಗೋಳಿಕ ಪ್ರದೇಶವನ್ನು ಅರ್ಥ ಮಾಡಿಕೊಂಡ ಸಮಾಜ ಸೇವೆ ಮತ್ತು ಮಾನವೀಯ ಗುಣಗಳನ್ನು ಹೊಂದಿರುವ ಸ್ವಯಂಸೇವಕರನ್ನು ಗುರುತಿಸಿ ತರಬೇತಿ ನೀಡಿದಾಗ ಸ್ಥಳೀಯವಾಗಿ ಬರುವ ಯಾವುದೇ ವಿಪತ್ತುಗಳನ್ನು ತುರ್ತು ಮತ್ತು ತಕ್ಷಣ ಸ್ಪಂದಿಸಲು ಸಾಧ್ಯವಾಗುವುದರ ಜೊತೆಗೆ ಸರಕಾರಿ ಮತ್ತು ಸರಕಾರೇತರ ಸಂಘ ಸಂಸ್ಥೆಗಳೊಂದಿಗೆ ಕ್ಷಿಪ್ರ ಕಾರ್ಯಾಚರಣೆ ನಡೆಸಲು ಅನುಕೂಲವಾಗುತ್ತದೆ ಎಂಬ ಮಹತ್ವಾಕಾಂಕ್ಷೆಯೊಂದಿಗೆ 'ಶೌರ್ಯ' ಸ್ವಯಂಸೇವಕರ ತಾಲೂಕು ಸಮಿತಿಗಳನ್ನು ರಚಿಸಲಾಗಿದೆ.

ಸ್ವಯಂಸೇವಕರ ತಂಡಗಳ ಮೇಲ್ವಿಚಾರಣೆ ಮತ್ತು ಅನುಪಾಲನೆಯನ್ನು ಮಾಡಲು ಯೋಜನೆಯಿಂದ ಒಂದು ವಿಭಾಗವನ್ನೇ ಈ ವ್ಯವಸ್ಥೆಗೆ ತೆರೆದಿದ್ದು, ಈ ವಿಭಾಗದ ಮೂಲಕ ಸ್ವಯಂಸೇವಕರ ತಾಲೂಕುವಾರು ಆಯ್ಕೆ, ತರಬೇತಿ, ಪದಾಧಿಕಾರಿಗಳ ಆಯ್ಕೆ, ಘಟಕ ರಚನೆ, ಮಾಸಿಕ ಸಭೆ, ವರದಿಗಳ ಸಂಗ್ರಹ ಮತ್ತು ಶ್ರೇಣೀಕರಣ, ಮಾಡಿದ ಸಾಧನೆಗಳ ಯಶೋಗಾಥೆಗಳನ್ನು ಕ್ರೋಢೀಕರಿಸಿ 'ಶೌರ್ಯ' ವಿಪತ್ತು ನಿರ್ವಹಣಾ ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ಮುಖ್ಯವಾಗಿ, ಈ ತಂಡಗಳು ವಿಪತ್ತು ನಿರ್ವಹಣಾ ಸೇವೆ, ಸಾಮಾಜಿಕ ಸ್ವಾಸ್ಥ್ಯ ಸೇವೆ, ವೈಯಕ್ತಿಕ ಕೌಶಲ್ಯ ಸೇವೆ, ಸಮಿತಿಗಳ ಸಾಧನೆಯ ಗುರುತಿಸುವಿಕೆ, ಮತ್ತು ಸ್ವಯಂ ವ್ಯಕ್ತಿತ್ವ ವಿಕಸನ ಹೀಗೆ 5 ಪ್ರಮುಖ ಸೂತ್ರಗಳ ಪ್ರಕಾರ ವರ್ಷದಾದ್ಯಂತ ನಿರಂತರ ಕೆಲಸವನ್ನು ಮಾಡುತ್ತಿದ್ದಾರೆ.





ಸ್ವಯಂಸೇವಕರಿಗೆ ಕೌಶಲ್ಯ ತರಬೇತಿ, ಸಮವಸ್ತ್ರ ಮತ್ತು ಪ್ರಮಾಣಪತ್ರ ವಿತರಣೆ, ಮಾಹಿತಿ ಕರಪತ್ರಗಳು ಮತ್ತು ಪುಸ್ತಕಗಳು, ಜೀವರಕ್ಷಣಾ ಮತ್ತು ಸೇವಾಕಾರ್ಯಗಳಿಗೆ ಪರಿಕರಗಳ ವಿತರಣೆ, ಸೇವಾ ಭತ್ತೆ, ವೈಯಕ್ತಿಕ ಸಾಧನೆಗೆ ಪ್ರಶಂಸೆ, ಮುಂತಾದ ವಿಶೇಷ ವ್ಯವಸ್ಥೆಯೊಂದಿಗೆ ವಿಪತ್ತು ಸೇವೆಯನ್ನು ನಿರ್ವಹಿಸುವ ಸಂಕಲ್ಪದಲ್ಲಿ ದೃಢವಾಗಿ ನಿಲ್ಲಲು ಯೋಜನೆಯು ಸಹಕಾರಿಯಾಗಿದೆ. ಪೂಜ್ಯರ ಈ ಮಹತ್ಕಾರ್ಯ ಇಂದು ಜನಮೆಚ್ಚುಗೆಗೆ ಪಾತ್ರವಾಗಿದ್ದು, ಜಿಲ್ಲಾಡಳಿತವೇ ಇವರ ಸೇವೆಯನ್ನು ಕೊಂಡಾಡುತ್ತಿದ್ದಾರೆ. ಪರಿಸರ ಜಾಗೃತಿ, ಸ್ವಚ್ಛತೆ, ಅರಣ್ಯೀಕರಣ, ಶಿಸ್ತುಪಾಲನೆ, ಸರಕಾರಿ ಸಂಸ್ಥೆಗಳೊಂದಿಗೆ ಸಹಭಾಗಿತ್ವ, ನಿರ್ಗತಿಕರ ಮೂಲಭೂತ ಸೌಕರ್ಯಗಳಿಗೆ ಸ್ಪಂದನೆ, ಸರಕಾರಿ ಮತ್ತು ಸರಕಾರೇತರ ಸಂಸ್ಥೆಗಳ ಮೂಲಕ ಸಾರ್ವಜನಿಕ ಶ್ರಮದಾನ, ಪ್ರಾಣಿ-ಪಕ್ಷಿಗಳ ಕಾಳಜಿ, ನೀರು ಉಳಿಸುವಿಕೆ, ವನ ಸಂರಕ್ಷಣೆ, ನೀರಿಂಗಿಸುವಿಕೆ, ಧಾರ್ಮಿಕ ಕೇಂದ್ರಗಳ ಸ್ವಚ್ಛತೆ, ಅಪಘಾತ ನಿರ್ವಹಣೆ, ಬಡಜನರ ಮನೆ ನಿರ್ಮಾಣ., ಹೀಗೆ ಹತ್ತು ಹಲವಾರು ಸೇವಾಕಾರ್ಯಗಳಲ್ಲಿ ತೊಡಗಿಸಿಕೊಂಡು ಸಮಾಜದಲ್ಲಿ ಸ್ಥಳೀಯ ಯೋಧರಂತೆ ಆಪತ್ಕಾಲದ ಆಪ್ತ ರಕ್ಷಕರಂತೆ ಕೆಲಸ ನಿರ್ವಹಿಸುತ್ತಿದ್ದಾರೆ.







"ಆಪತ್ತಿನಲ್ಲಿರುವವರನ್ನು ನಿಸ್ವಾರ್ಥವಾಗಿ ರಕ್ಷಿಸುವ ನಿಜವಾದ ಆಪ್ತರಕ್ಷಕ ತಂಡವೇ 'ಶೌರ್ಯ'. ಇನ್ನೊಬ್ಬರ ಕಷ್ಟಕ್ಕೆ ಸ್ಪಂದಿಸಿ ನೀಡುವ ಸೇವೆಯನ್ನು ದೇವರು ಮೆಚ್ಚುತ್ತಾನೆ. ಪರೋಪಕಾರ ಎಂಬುದು ಮಹೋನ್ನತ ತ್ಯಾಗವಾಗಿದ್ದು, ಈ ಧ್ಯೇಯದಡಿ 'ಶೌರ್ಯ' ವಿಪತ್ತು ನಿರ್ವಹಣಾ ತಂಡ ಕಾರ್ಯನಿರ್ವಹಿಸುತ್ತಿದೆ."

– ಡಾ|| ಡಿ. ವೀರೇಂದ್ರ ಹೆಗ್ಗಡೆಯವರು
ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ

# 1. ಸಮಗ್ರ ಸಾಧನೆಯ ವಿವರ

| ಕ್ರ.ಸಂ. | ವಿಷಯ | 2024-25 | ಇದುವರೆಗೆ ಒಟ್ಟು |
|---|---|---|---|
| 1. | ಅನುಷ್ಠಾನದ ತಾಲೂಕುಗಳು | – | 91 |
| 2. | ಸ್ವಯಂಸೇವಕರ ಸಂಖ್ಯೆ | – | 10,460 |
| 3. | ಸಮಾಲೋಚನೆ ಸಭೆ, ಸಂಯೋಜಕರ ತರಬೇತಿ | 70 | 361 |
| 4. | ನೀಡಿದ ಸೇವಾ ಮತ್ತು ತುರ್ತು ರಕ್ಷಣಾ ಪರಿಕರಗಳು | 6 | 74 |
| 5. | ಯೋಜನೆಯ ಅನುದಾನ | 1,46,86,265 | 4,54,56,863 |
| 6. | ಕ್ಷಿಪ್ರ ತಂಡಗಳ ರಚನೆ | – | 14 |
| 7. | ವಿಪತ್ತು ಸ್ಪಂದನಾ ಚಟುವಟಿಕೆಗಳು | 12,492 | 1,77,385 |
| 8. | ಸಾಮಾಜಿಕ ಸೇವಾ ಕಾರ್ಯಗಳು | 21,869 | 2,12,872 |
| 9. | ನೀಡಿದ ಸಮವಸ್ತ್ರ (ಟೀ ಶರ್ಟ್)ಗಳು | 2,814 | 14,374 |
| 10. | ನೀಡಿದ ಸಮವಸ್ತ್ರ (ಪ್ಯಾಂಟ್)ಗಳು | – | 2,000 |
| 11. | ನೀಡಿದ ಕ್ಯಾಪ್ (ಟೊಪ್ಪಿ) | 537 | 1,890 |
| 12 | ನೀಡಿದ ತರಬೇತಿಯ ಪ್ರಮಾಣ ಪತ್ರಗಳು | – | 10,300 |
| 13. | ವಲಯ ಘಟಕಗಳ ರಚನೆ | 192 | 604 |
| 14. | ವಲಯ ಘಟಕದ ಮಾಸಿಕ ಸಭೆಗಳು | 2353 | 11,999 |
| 15. | ತಾಲೂಕು ಸಮಿತಿ ಸಭೆಗಳು | 80 | 399 |
| 16. | ಕೌಶಲ್ಯ ತರಬೇತಿಗಳು | 62 | 1317 |
| 17. | ವಾತ್ಸಲ್ಯ ಮನೆ ನಿರ್ಮಾಣಕ್ಕೆ ಸಹಕಾರ | 34 | 79 |
| 18. | ಸ್ವಚ್ಛತಾ ಕಾರ್ಯಕ್ರಮಗಳು | 4765 | 78,609 |
| 19. | ಗ್ರಾಮ ಸುಭಿಕ್ಷಾ ಕಾರ್ಯಕ್ರಮಗಳಲ್ಲಿ ಸ್ವಯಂಸೇವಕರ ಸೇವೆ | 316 | 9661 |
| 20. | ಶ್ರೀ ಧರ್ಮಸ್ಥಳ ಪಾದಯಾತ್ರಿಗಳಿಗೆ ಸಹಕಾರ | 18 | 91 |
| 21 | ಸ್ವಯಂಸೇವಕರ ತಾಲೂಕು ಡೈರೆಕ್ಟರಿ | 80 | 83 |
| 22 | ಸ್ವಯಂಸೇವಕರಿಗೆ ಕ್ರಿಟಿಕಲ್ ಆರೋಗ್ಯ ಸೌಲಭ್ಯ | 2,72,000.00 | 32,70,676.00 |
| 23 | ಸ್ವಯಂಸೇವಕರಿಗೆ ಯೋಜನೆಯಿಂದ ಆರ್ಥಿಕ ನೆರವು | – | 1,47,565.00 |
| 24 | ಆಪದ್‌ಮಿತ್ರ ತರಬೇತಿಗೆ ಪ್ರೇರಣೆ | 1 | 49 |
| 25 | ಶೌರ್ಯ ಸಾಧಕರು | – | 75 |
| 26 | ವಿಪತ್ತು ನಿರ್ವಹಣಾ ಪ್ರಾಧಿಕಾರದ ಭೇಟಿ | 2 | 66 |
| 27 | ಅಗ್ನಿಶಾಮಕ ಮುಖ್ಯಸ್ಥರ ಭೇಟಿ | 2 | 6 |
| 28 | ಪುಸ್ತಕ, ಮಾಹಿತಿ ಪತ್ರ ಮತ್ತು ತರಬೇತಿ ಕೈಪಿಡಿ | 500 | 15,610 |
| 29 | ಅರಣ್ಯ ಇಲಾಖೆಯ ಸಹಭಾಗಿತ್ವದ ತರಬೇತಿ | 2 | 2 |
| 30 | ಎನ್.ಡಿ.ಆರ್.ಎಫ್ ತರಬೇತಿ | 4 | 34 |
| 31 | ಪೊಲೀಸ್ ಇಲಾಖೆಯೊಂದಿಗೆ ಸಂಚಾರಿ ನಿಯಂತ್ರಣ ಸೇವೆಗಳು | 6 | 49 |
| 32 | ಪ್ರಶಸ್ತಿಗಳು | 1 | 1 |

## 2. ಸುತ್ತೋಲೆಗಳು

| ಕ್ರ.ಸಂ. | ಸುತ್ತೋಲೆ ಸಂಖ್ಯೆ | ವಿಷಯ |
|---|---|---|
| 1. | 20/EDOO/2024-25, 06.06.2024 | ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮ ಅನುಷ್ಠಾನದ ಕುರಿತು |
| 2. | 28/EDOO/2024-25, 19.06.2024 | ಶೌರ್ಯ ಸ್ವಯಂಸೇವಕರಿಗೆ ಆರೋಗ್ಯ ಸೌಲಭ್ಯ ಯೋಜನೆಯಲ್ಲಿ ಗಮನಿಸಬೇಕಾದ ಅಂಶಗಳ ಕುರಿತು. |
| 3. | 115/EDOO/2024-25, 25.02.2025 | ಶೌರ್ಯ ಸದಸ್ಯರಿಗೆ (ದೃಢೀಕರಿಸಿದ) ಆರೋಗ್ಯ ಸೌಲಭ್ಯ ಯೋಜನೆಯ ಅಡಿಯಲ್ಲಿ ಕ್ರಿಟಿಕಲ್ ಫಂಡ್ ಸೌಲಭ್ಯ ನೀಡುವ ಕುರಿತು. |
| 4. | 2006/002461/24-25 | ಶೌರ್ಯ ಸ್ವಯಂಸೇವಕರ ಸಮವಸ್ತ್ರ ಮತ್ತು ರಾಜೀನಾಮೆಗೆ ಸಂಬಂಧಪಟ್ಟ ವಿಚಾರಗಳಲ್ಲಿ ಅನುಷ್ಠಾನಿಸಬೇಕಾದ ವಿಚಾರಗಳ ಕುರಿತು. |
| 5. | 2006/001258/2024-25 | ಶೌರ್ಯ ಸಮಿತಿಗಳ ಮಾಸ್ಟರ್ ಮತ್ತು ಕ್ಯಾಪ್ಟನ್‌ಗಳ ವಿಶೇಷ ತರಬೇತಿ ಶಿಬಿರದ ಕುರಿತು. |

## 3. ಶೌರ್ಯ ಕಾರ್ಯಕ್ರಮಕ್ಕೆ ಯೋಜನೆಯಿಂದ ಭರಿಸಲಾದ ಖರ್ಚು-ವೆಚ್ಚಗಳ ವಿವರ

| ಕ್ರ.ಸಂ | ವಿಷಯ | 2020-24 | 2024-25 | ಇದುವರೆಗೆ ಒಟ್ಟು |
|---|---|---|---|---|
| 1 | ಸಂಯೋಜಕರ ಮತ್ತು ಸ್ವಯಂಸೇವಕರ ತರಬೇತಿ | 57,99,838 | 13,47,484 | 71,47,322 |
| 2 | ಸಂಯೋಜಕರ ಸಭೆಗಳು ಮತ್ತು ಸಮಿತಿ ಸಭೆಗಳು | 3,94,575 | 59,74,426 | 63,69,001 |
| 3 | ಸೇವಾ ಭತ್ತೆ | 34,88,083 | 49,39,316 | 84,27,399 |
| 4 | ಸಮವಸ್ತ್ರ ವೆಚ್ಚ | 35,952 | 12,30,000 | 47,30,952 |
| 5 | ಕ್ಯಾಪ್ ಖರೀದಿ ವೆಚ್ಚ | 2,60,000 | - | 2,60,000 |
| 6 | ರಕ್ಷಣಾ ಪರಿಕರಗಳ ವೆಚ್ಚ | 1,09,56,920 | 8,63,646 | 1,18,20,566 |
| 7 | ಪುಸ್ತಕ, ಪ್ರಮಾಣ ಪತ್ರ ಮತ್ತು ಮುದ್ರಣ ವೆಚ್ಚ | 7,32,193 | 40,070 | 7,72,263 |
| 8 | ಆರೋಗ್ಯ ಸೌಲಭ್ಯ ವೆಚ್ಚ | 41,78,612 | 2,77,100 | 44,55,712 |
| 9 | ಇತರ ವೆಚ್ಚ | 14,59,425 | 58,623 | 15,18,048 |
| | **ಒಟ್ಟು** | **3,07,70,598** | **1,47,30,665** | **4,55,01,263** |

# 4. ವಿಶೇಷ ಕಾರ್ಯಾಚರಣೆಗಳು

**1. ಶಿರೂರು ಭೂಕುಸಿತ :**



ಜುಲೈ 16, 2024ರಂದು ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಸಂಭವಿಸಿದ ಭಾರಿ ಭೂಕುಸಿತದ ಸ್ಥಳದಲ್ಲಿ ಸರಕಾರಿ ರಕ್ಷಣಾ ಪಡೆಯೊಂದಿಗೆ ಅಂಕೋಲಾ ಮತ್ತು ಕುಮಟಾ ತಾಲೂಕಿನ ವಿಪತ್ತು ನಿರ್ವಹಣಾ ಸ್ವಯಂಸೇವಕರಿಂದ ಕಾರ್ಯಾಚರಣೆ. ಅಂಕೋಲಾ ತಾಲ್ಲೂಕಿನ ಸ್ವಯಂಸೇವಕರಿಂದ ತೋಡುರು, ಚೆಂಡಿಯಾ, ಅಮದಳ್ಳಿ, ಅರಗಾ ಮತ್ತಿತರ ಕಡೆಗಳಲ್ಲಿ ಮನೆಗಳು ಜಲಾವೃತಗೊಂಡಾಗ ಸಂತ್ರಸ್ತರನ್ನು ದೋಣಿಯ ಮೂಲಕ ರಕ್ಷಿಸಿ ಸುರಕ್ಷಿತ ಸ್ಥಳ ಮತ್ತು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ. ಈ ಕಾರ್ಯಾಚರಣೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಕುಮಟಾ, ಕಾರವಾರ, ಹೊನ್ನಾವರ, ಭಟ್ಕಳ, ಶಿರಸಿ, ಸಿದ್ದಾಪುರ ತಾಲ್ಲೂಕಿನ ವಿಪತ್ತು ನಿರ್ವಹಣಾ ಘಟಕಗಳ ಸುಮಾರು 700 ಸ್ವಯಂಸೇವಕರು ಅವಿರತ ಶ್ರಮ ನೀಡಿರುತ್ತಾರೆ. ಮುಖ್ಯ ಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ, ಪರಮ ಪೂಜ್ಯರು ಭೇಟಿ ನೀಡಿದ ಸಂದರ್ಭದಲ್ಲಿ ಸ್ವಯಂಸೇವಕರು ಜೊತೆಯಲ್ಲಿದ್ದರು.

**2. ಕೃಷ್ಣಾನದಿ ಪ್ರವಾಹ:**

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಅಥಣಿ ಜಿಲ್ಲೆಯ ಸ್ವಯಂಸೇವಕರು ಕೃಷ್ಣಾ ನದಿಯ ಪ್ರವಾಹದಲ್ಲಿ ತೊಂದರೆ ಅನುಭವಿಸಿದ ಕುಟುಂಬಗಳಿಗೆ ಸಂಪೂರ್ಣ ನೆರವು ನೀಡಲು ಶ್ರಮಿಸಿರುತ್ತಾರೆ. ಚಿಕ್ಕೋಡಿ ತಾಲ್ಲೂಕಿನ ಮಾಂಜರಿ, ಇಂಗಳಿ, ಯಡೂರು, ಚಂದೂರು, ಕಲ್ಲೋಳ, ಅಂಕಲಿ ಸೇರಿ ಅನೇಕ ಗ್ರಾಮಗಳು ಪ್ರವಾಹದ ಭೀತಿ ಅನುಭವಿಸಿದ್ದು ಜಿಲ್ಲೆಯ 300ಕ್ಕೂ ಹೆಚ್ಚು ಸ್ವಯಂಸೇವಕರು ಒಂದು ವಾರಕ್ಕೂ ಹೆಚ್ಚು ನಿರಂತರವಾಗಿ ಕಾರ್ಯಾಚರಣೆಯಲ್ಲಿ ತೊಡಗಿಕೊಂಡಿರುತ್ತಾರೆ.

**3. ಪ್ರವಾಹ ಭೀತಿಗೆ ಪೂರ್ವಸಿದ್ಧತೆ:**

ನಿಪ್ಪಾಣಿ, ಹುಕ್ಕೇರಿ, ಸಂಕೇಶ್ವರ ಭಾಗದಲ್ಲಿ ಸ್ವಯಂಸೇವಕರು ಪ್ರವಾಹ ಬರುವ ಮುಂಚಿತವಾಗಿ ಮನೆ ಮನೆ ಭೇಟಿ ಮಾಡಿ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ.

**4. ಮುಳುಗಡೆ ಗ್ರಾಮಗಳಲ್ಲಿ ಸೇವೆ:**

ಬಾಗಲಕೋಟೆ ಜಿಲ್ಲೆಯಲ್ಲಿ ಕೃಷ್ಣಾ ಹಾಗೂ ಘಟಪ್ರಭಾ ನದಿಗಳ ಪ್ರವಾಹದಿಂದ ಜಮಖಂಡಿ, ಹುನಗುಂದ, ಬಾದಾಮಿ ತಾಲ್ಲೂಕಿನ ನದಿ ತೀರದ ಗ್ರಾಮಗಳು ನೀರಿನಲ್ಲಿ ಮುಳುಗಿದ್ದು ಸ್ಥಳೀಯ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸವನ್ನು ಜಿಲ್ಲೆಯ ಸ್ವಯಂಸೇವಕರು ಮಾಡಿರುತ್ತಾರೆ.

**5. ತುರ್ತು ಕಾರ್ಯಾಚರಣೆ ಘಟಕ:**

ಮಲೆನಾಡು ಪ್ರದೇಶವಾದ ಚಿಕ್ಕಮಗಳೂರು, ಕೊಪ್ಪ, ತೀರ್ಥಹಳ್ಳಿ, ಶೃಂಗೇರಿ, ಮೂಡಿಗೆರೆ, ಸಕ್ಲೇಶಪುರ, ಕಾರ್ಕಳ, ಶಿರಸಿ, ಸಿದ್ಧಾಪುರ, ಕಳಸಗಳಲ್ಲಿ ಮಳೆ, ಗಾಳಿಯಿಂದ ಮರ ಮತ್ತು ರಸ್ತೆ ತಡೆ ಉಂಟಾದಾಗ ತುರ್ತು ಧಾವಿಸಿ ತೆರವು ಕಾರ್ಯ ನಡೆಸಿರುತ್ತಾರೆ.

**6. ಸಂಚಾರಿ ವ್ಯವಸ್ಥೆಯಲ್ಲಿ ಸಹಕಾರ:**



ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಬಂಟ್ವಾಳ, ಸುಳ್ಯ, ಕಡಬ, ವಿಟ್ಲ, ಮಂಗಳೂರು ತಾಲ್ಲೂಕುಗಳಲ್ಲಿ ಮನೆ, ಅಣೆಕಟ್ಟು, ಸೇತುವೆ, ಮರ ಮಟ್ಟುಗಳ ತೆರವು ಮುಂತಾದ ಕಾರ್ಯಾಚರಣೆಯನ್ನು ಮಾಡಿರುತ್ತಾರೆ.

**7. ಶ್ರಮದಾನ:**



ಬೆಳ್ತಂಗಡಿ ತಾಲ್ಲೂಕಿನ ನೆರಿಯ, ಶಿಶಿಲ, ಚಾರ್ಮಾಡಿ, ಮುಂಡಾಜೆ ಭಾಗಗಳಲ್ಲಿ ಅತಿಯಾದ ಗಾಳಿಯಿಂದ ಅನೇಕ ಮನೆಗಳು ಉರುಳಿದ್ದು ರಿಪೇರಿ ಶ್ರಮದಾನವನ್ನು ನಡೆಸಿರುತ್ತಾರೆ. ಗಾಳಿ ಮಳೆಯಿಂದ ಹಾನಿಗೊಳಗಾದ ಸುಮಾರು 18 ಮನೆಗಳಿಗೆ ಯೋಜನೆಯಿಂದ ಸಹಕಾರ ಲಭಿಸಿದೆ.



**8. ಪ್ರವಾಹ ಕಾರ್ಯಾಚರಣೆಯ ತರಬೇತಿ:**

ಉಡುಪಿ, ಬ್ರಹ್ಮಾವರ ಮತ್ತು ಕಾಪು ತಾಲ್ಲೂಕಿನ 130 ಸ್ವಯಂಸೇವಕರಿಗೆ ಎನ್.ಡಿ.ಆರ್. ಎಫ್ ಮತ್ತು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಉಡುಪಿ ಇದರ ವತಿಯಿಂದ ಪ್ರವಾಹ ಕಾರ್ಯಾಚರಣೆಯ ತರಬೇತಿಯನ್ನು ನೀಡಲಾಗಿದೆ.

**9. ಜಾತ್ರಾ ಬಂದೋಬಸ್ತು:**

ಖಾನಾಪುರದ ಶ್ರೀ ಲಕ್ಷ್ಮೀ ದೇವಿಯ ಜಾತ್ರೆಯ ಪ್ರಯುಕ್ತ 10 ದಿನಗಳ ಕಾಲ ಪೊಲೀಸ್ ಬಂದೋಬಸ್ತು ಪ್ರಕ್ರಿಯೆಯಲ್ಲಿ ಪೊಲೀಸರ ವಿನಂತಿಯ ಮೇರೆಗೆ 110 ಮಂದಿ ಖಾನಾಪುರ ಮತ್ತು ಹಳಿಯಾಳ ತಾಲೂಕಿನ ಸ್ವಯಂಸೇವಕರು ತರಬೇತಿ ಪಡೆದು ಭಾಗವಹಿಸಿರುತ್ತಾರೆ.

**10. ಮಹಾಶಿವರಾತ್ರಿ ಪಾದಯಾತ್ರೆ:**

ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಶಿವರಾತ್ರಿ ಪ್ರಯುಕ್ತ ನಡೆದುಕೊಂಡು ಬರುವ ಭಕ್ತಾದಿಗಳಿಗೆ ಕುಡಿಯುವ ನೀರು, ವಿಶ್ರಾಂತಿ, ಶೌಚ ಮತ್ತು ಸ್ವಚ್ಛತೆಯ ಕಾರ್ಯದಲ್ಲಿ ಬೆಳ್ತಂಗಡಿ, ಮೂಡಿಗೆರೆ, ಕಡಬ, ಗುರುವಾಯನಕೆರೆಯ ಸ್ವಯಂಸೇವಕರು 3 ದಿನಗಳ ಕಾಲ ಸ್ವಯಂಪ್ರೇರಿತರಾಗಿ ಕೆಲಸ ನಿರ್ವಹಿಸಿರುತ್ತಾರೆ.

**11. ವನ್ಯಜೀವಿ ಕಾಳಜಿ ಮತ್ತು ಕಾಡ್ಗಿಚ್ಚು ನಿಯಂತ್ರಣ ಜಾಗೃತಿ ಅಭಿಯಾನ :**

ಬೆಳ್ತಂಗಡಿ, ಕಡಬ, ಮೂಡಿಗೆರೆ, ಸಕಲೇಶಪುರ, ಚಿಕ್ಕಮಗಳೂರು, ಕಳಸ ತಾಲ್ಲೂಕುಗಳಲ್ಲಿ ಕಾಡ್ಗಿಚ್ಚು ನಿಯಂತ್ರಣದ ಬಗ್ಗೆ ಅರಣ್ಯ ಇಲಾಖೆಯ ವತಿಯಿಂದ ಶಾಲಾ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲು ಶಿಶಿಲ, ಚಾರ್ಮಾಡಿ, ಬಣಕಲ್, ಖಾಂಡ್ಯಗಳಲ್ಲಿ ವ್ಯವಸ್ಥೆ ಮಾಡಲಾಗಿದೆ.

**12. ಪ್ರಾಣಿ ಪಕ್ಷಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ :**

ಪ್ರಾಣಿ ಪಕ್ಷಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವಂತೆ ಕಾರ್ಯಕರ್ತರಿಗೆ ತಿಳಿಸಿದ ಪ್ರಕಾರ ರಾಜ್ಯಾದ್ಯಂತ ಈ ಕೆಲಸವನ್ನು ವಿವಿಧ ರೀತಿಯಲ್ಲಿ ಹಮ್ಮಿಕೊಂಡಿರುತ್ತಾರೆ.

**13. ಸಸ್ಯಗಳಿಂದ ಸ್ವಾಸ್ಥ್ಯ ಕಾರ್ಯಾಗಾರ:**

ಬೆಳ್ತಂಗಡಿ ತಾಲೂಕಿನ ಚಾರ್ಮಾಡಿಯಲ್ಲಿ ಕರ್ನಾಟಕ ರಾಜ್ಯ ಗಿಡಮೂಲಿಕ ಔಷಧಿ ಪ್ರಾಧಿಕಾರ, ಅರಣ್ಯ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾದ ಈ ಕಾರ್ಯಾಗಾರದಲ್ಲಿ 60ಕ್ಕೂ ಮಿಕ್ಕಿದ ಬೆಳ್ತಂಗಡಿ ಮತ್ತು ಗುರುವಾಯನಕೆರೆಯ ಸ್ವಯಂಸೇವಕರು ಮಾಹಿತಿ ಪಡೆದಿರುತ್ತಾರೆ.

**ಮುಖ್ಯ ವಿಚಾರಗಳು:**

- ರಾಜ್ಯದ 91 ತಾಲೂಕಿನಲ್ಲಿ 'ಶೌರ್ಯ' ವಿಪತ್ತು ನಿರ್ವಹಣಾ ಸಮಿತಿಗಳನ್ನು ಅನುಷ್ಠಾನಗೊಳಿಸಲಾಗಿದೆ.
- ಪ್ರತೀ ತಾಲೂಕು ಸಮಿತಿಯಲ್ಲಿ 100ರಿಂದ 200 ರವರೆಗೆ ಸ್ವಯಂಸೇವಕರಿದ್ದಾರೆ.
- ಸ್ವಯಂಸೇವಕರಿಗೆ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಪೊಲೀಸು ಇಲಾಖೆ, ಅಗ್ನಿಶಾಮಕದಳ, ಆರೋಗ್ಯ ಇಲಾಖೆ, ವಿಪತ್ತು ನಿರ್ವಹಣಾ ಕೋಶ, ತರಬೇತು ಸಂಸ್ಥೆಗಳ ಪರಿಣತರಿಂದ ತರಬೇತಿ ನೀಡಲಾಗಿದೆ.
- ಸ್ವಯಂಸೇವಕರ ವೈಯಕ್ತಿಕ ಕೆವೈಸಿ ದಾಖಲೆ ಮತ್ತು ಸ್ವಯಂಘೋಷಣಾ ಪತ್ರವನ್ನು ಪಡೆದು ಎಲ್ಲಾ ದಾಖಲಾತಿ, ನೋಂದಾವಣೆಯನ್ನು ಮಾಡಲಾಗಿದೆ.
- ಎಲ್ಲಾ 10,460 ಸ್ವಯಂಸೇವಕರಿಗೆ ಕ್ರಿಟಿಕಲ್ ಇಲ್‌ನೆಸ್ ಫಂಡ್ ಮಾಡಲಾಗಿದೆ. ಇದುವರೆಗೆ ಒಟ್ಟು ರೂ. 44.55 ಲಕ್ಷ ವೆಚ್ಚದಲ್ಲಿ ಆರೋಗ್ಯ ಸೌಲಭ್ಯ ಪಡೆದಿರುತ್ತಾರೆ.
- ತಿಂಗಳಿಗೊಂದು ಸಾಮಾಜಿಕ ಸೇವೆ ಮತ್ತು ತುರ್ತು ಸಂದರ್ಭದ ಎಲ್ಲಾ ವಿಪತ್ತು ಸೇವೆಗಳನ್ನು ನಿರ್ವಹಿಸಲು ಮಾರ್ಗದರ್ಶನ ನೀಡಲಾಗಿದೆ.
- ಪ್ರತೀ 100 ಜನರ ತಂಡದಲ್ಲಿ ಗರಿಷ್ಠ 30 ಮಹಿಳೆಯರನ್ನು ಆಯ್ಕೆ ಮಾಡಲಾಗಿದೆ.
- ಕಾರ್ಯಕ್ರಮದ ಅನುಪಾಲನೆಗೆ ವಲಯವಾರು ಘಟಕಗಳನ್ನು ರಚಿಸಿದ್ದು, ರಾಜ್ಯದಲ್ಲಿ 604 ಘಟಕಗಳು ಚಾಲ್ತಿಯಲ್ಲಿವೆ. ಸಭೆಯ ನಿರ್ವಹಣೆಗೆ ನಿರ್ಣಯ ಪುಸ್ತಕಗಳನ್ನು ನೀಡಲಾಗಿದೆ.
- ಇದುವರೆಗೆ ಒಟ್ಟು 3,89,359 ಚಟುವಟಿಕೆಗಳನ್ನು ನಿರ್ವಹಿಸಿದ್ದು, ಈ ಉದ್ದೇಶಕ್ಕಾಗಿ 23,36,154 ಮಾನವ ದಿನಗಳನ್ನು ಸಮಾಜಕ್ಕೆ ಸಮರ್ಪಿಸಿರುತ್ತಾರೆ.
- ರಕ್ಷಣಾ ಮತ್ತು ಶ್ರಮದಾನದ ಪರಿಕರಗಳನ್ನು 74 ಯೋಜನಾ ಕಚೇರಿಗಳ ನಿರ್ದಿಷ್ಟ ಸ್ಥಳಗಳಲ್ಲಿ ಇರಿಸಲಾಗಿದೆ.
- 14 ಕ್ಷಿಪ್ರ ತಂಡಗಳು ಯಾವುದೇ ತುರ್ತು ಸಂದರ್ಭದಲ್ಲಿ ಕೆಲಸ ಮಾಡಲು ಸಜ್ಜಾಗಿರುತ್ತಾರೆ.
- ಸಮಿತಿಯ ಅನುಪಾಲನೆಗೆ ಮಾಸ್ಟರ್, ಕ್ಯಾಪ್ಟನ್, ಘಟಕ ಪ್ರತಿನಿಧಿ ಮತ್ತು ಸಂಯೋಜಕರಿರುತ್ತಾರೆ.
- ವರ್ಷದಲ್ಲಿ 2 ಬಾರಿ ನಡೆಸುವ ತಾಲೂಕು ಸಮಿತಿ ಸಭೆಗಳಲ್ಲಿ ಸ್ವಯಂಸೇವಕರ, ಕಾರ್ಯಕರ್ತರ, ಕಾರ್ಯಕ್ರಮದ ಮತ್ತು ಘಟಕಗಳ ಮೌಲ್ಯಮಾಪನ ಮಾಡಲಾಗುತ್ತದೆ.
- ಶೌರ್ಯ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 90 ವಾಟ್ಸಾಪ್ ಗುಂಪುಗಳ ನಿರ್ವಹಣೆ, ವರದಿಗಳ ಸಂಗ್ರಹಣೆಗಾಗಿ 10 ವಿವಿಧ ನಮೂನೆಗಳನ್ನು ಮಾಡಲಾಗಿದೆ.
- 80 ವಿಪತ್ತು ನಿರ್ವಹಣಾ ಸಮಿತಿಯ ಸ್ವಯಂಸೇವಕರ ಕೈಪಿಡಿಯನ್ನು ತಯಾರಿಸಲಾಗಿದೆ. ಪ್ರತಿ ಯೋಜನಾ ಕಚೇರಿಗಳಿಗೆ ಸ್ವಯಂಸೇವಕರ ಸಮಗ್ರ ಮಾಹಿತಿಯುಳ್ಳ ಡೈರೆಕ್ಟರಿಯನ್ನು ನೀಡಲಾಗಿದೆ.

- **ಶೌರ್ಯ ವೆಬ್‌ಸೈಟ್ :** ಶೌರ್ಯ ಕಾರ್ಯಕ್ರಮದ ಸಂಪೂರ್ಣ ಮಾಹಿತಿಯನ್ನೊಳಗೊಂಡ ವೆಬ್‌ಸೈಟ್ www.skdrdpdisastermanagement.org ಮಾಡಲಾಗಿದೆ. ಇದರಲ್ಲಿ ಸ್ವಯಂಸೇವಕರ ಫೋಟೋ ಸಹಿತವಾದ ಮಾಹಿತಿ ಲಭ್ಯವಿದೆ.
- **ಪ್ರಮುಖ ವಿಪತ್ತು ನಿರ್ವಹಣೆಯ ಕಾರ್ಯಗಳು:** ಸ್ವಯಂಸೇವಕರು ವಿಪತ್ತು ನಿರ್ವಹಣೆಯಲ್ಲಿ ಪ್ರಮುಖವಾಗಿ ಪ್ರವಾಹ ಕಾರ್ಯಾಚರಣೆ, ಅಗ್ನಿ ದುರಂತ, ಗುಡ್ಡ ಕುಸಿತ, ಅಪಘಾತ, ಆತ್ಮಹತ್ಯೆ, ಸಿಲಿಂಡರ್ ಸ್ಫೋಟ, ತುರ್ತು ರಕ್ತದಾನ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಪೊಲೀಸು, ಅರಣ್ಯ, ಅಗ್ನಿಶಾಮಕದಳ, ಆರೋಗ್ಯ ಇಲಾಖೆ, ವಿದ್ಯುತ್ ನಿಗಮದ ಜೊತೆಗೂಡಿ ಕಾರ್ಯಾಚರಣೆ, ಕಾಡುಪ್ರಾಣಿಗಳ ಹಾವಳಿ, ಪ್ರಥಮ ಚಿಕಿತ್ಸೆ, ಮನೆಗಳ ದುರಸ್ಥಿ, ಮನೆಗಳ ಸ್ವಚ್ಛತೆ, ಕಾಲುಸಂಕಗಳು, ರಸ್ತೆ ರಿಪೇರಿ, ಕುಡಿಯುವ ನೀರು ಮತ್ತು ಆಹಾರ ಸಾಮಗ್ರಿಗಳ ಪೂರೈಕೆ, ಹಾವು ಕಡಿತ, ಶೌಚಾಲಯ ನಿರ್ಮಾಣ, ಗಂಜಿಕೇಂದ್ರ ಕಾರ್ಯಾಚರಣೆ, ತಾತ್ಕಾಲಿಕ ಮನೆ ನಿರ್ಮಾಣ, ಶವ ಸಂಸ್ಕಾರ, ಅಂಬುಲೆನ್ಸ್ ಮತ್ತು ಆರೋಗ್ಯ ಸೇವೆ, ಅಣೆಕಟ್ಟು ಸ್ವಚ್ಛತೆ ಹೀಗೆ ವಿವಿಧ ರೀತಿಯ ವಿಪತ್ತು ಸೇವೆಗಳನ್ನು ನಿರ್ವಹಿಸುತ್ತಿದ್ದಾರೆ.





- **ಪ್ರಮುಖ ಸಾಮಾಜಿಕ ಸೇವೆಯ ಪ್ರಕಾರಗಳು:** ಸ್ವಯಂಸೇವಕರು ಸಾಮಾಜಿಕ ಸೇವೆಯಲ್ಲಿ ಪ್ರಮುಖವಾಗಿ ಗಿಡಗಳನ್ನು ನೆಡುವುದು, ಮರಗಳನ್ನು ಪೋಷಿಸುವುದು, ಸಾರ್ವಜನಿಕ ಸ್ವಚ್ಛತೆ, ಪ್ರಾಣಿ ಪಕ್ಷಿಗಳಿಗೆ ಪ್ರಥಮ ಚಿಕಿತ್ಸೆ ಮತ್ತು ಆಹಾರ, ನೀರು ಪೂರೈಕೆ, ರಸ್ತೆ ಸ್ವಚ್ಛತೆ, ನೀರಿನ ಟ್ಯಾಂಕ್ ಸ್ವಚ್ಛತೆ, ರಕ್ತದಾನ ಶಿಬಿರ, ಸೌಹಾರ್ದ ಸಭೆ, ಮಾಹಿತಿ ಸಭೆ, ಗ್ರಾಮ ಸಭೆ, ಸರಕಾರಿ ಸೌಲಭ್ಯಗಳ ಮಾಹಿತಿ, ಜಲಾನಯನ, ಮದ್ಯವರ್ಜನ ಶಿಬಿರ, ಶಾಲೆಗಳಿಗೆ ತರಬೇತಿ, ಶಾಲೆಗಳ ಮೂಲಭೂತ ಸೌಕರ್ಯಕ್ಕೆ ಸಹಕಾರ, ಬಸ್‌ಸ್ಟ್ಯಾಂಡ್ ರಿಪೇರಿ, ರಾಷ್ಟ್ರೀಯ ಹಬ್ಬಗಳ ಆಚರಣೆ, ರೈತರಿಗೆ ಸಹಕಾರ, ಅನಾರೋಗ್ಯ ಪೀಡಿತರಿಗೆ ಸಹಕಾರ, ಅಸ್ವಸ್ಥ ಮನೋರೋಗಿಗಳಿಗೆ ಸಹಕಾರ, ಆಹಾರ, ಔಷಧಿ ಪೂರೈಕೆ, ಮರಣ ಸಾಂತ್ವಾನ, ಪಾದಯಾತ್ರೆ, ಧಾರ್ಮಿಕ ಶ್ರದ್ಧಾಕೇಂದ್ರಗಳಲ್ಲಿ ಶ್ರಮದಾನ, ಸಾಮೂಹಿಕ ಅನ್ನಸಂತರ್ಪಣೆಗೆ ಸಹಕಾರ, ಜಾಗೃತಿ ಕಾರ್ಯಕ್ರಮಗಳು, ಬೀಚ್, ನದಿ ದಡ, ಐತಿಹಾಸಿಕ ಸ್ಥಳ, ಧಾರ್ಮಿಕ ಸ್ಥಳಗಳ ಸ್ವಚ್ಛತೆ, ಕಾಲುವೆ ದುರಸ್ಥಿ, ಕುಡಿಯುವ ನೀರಿನ ಬಾವಿ ಸ್ವಚ್ಛತೆ ಮುಂತಾದ ಸಾಮಾಜಿಕ ಸೇವೆಗಳನ್ನು ನಿರ್ವಹಿಸುತ್ತಿದ್ದಾರೆ.





- ರಾಜ್ಯದಲ್ಲಿ 80ಕ್ಕೂ ಮಿಕ್ಕಿದ ಸ್ವಯಂಸೇವಕರು ವಿಶೇಷ ಕೌಶಲ್ಯ ಹೊಂದಿರುವ ಪ್ರತಿಭಾನ್ವಿತ ಸ್ವಯಂಸೇವಕರಾಗಿರುತ್ತಾರೆ. ಮುಖ್ಯವಾಗಿ ಮುಳುಗುತಜ್ಞರು, ಅಂಬುಲೆನ್ಸ್ ಚಾಲಕರು, ಪ್ರಥಮ ಚಿಕಿತ್ಸೆ ನೀಡುವವರು, ಉರಗ ರಕ್ಷಕರು, ನಾಟಿ ವೈದ್ಯರು, ನಿವೃತ್ತ ಯೋಧರು, ತರಬೇತುದಾರರು ಹೀಗೆ ತುರ್ತು ಸಂದರ್ಭ ಬಂದಾಗ ಶೀಘ್ರವೇ ಸ್ಪಂದಿಸಿ ವೈಯಕ್ತಿಕ ಸೇವೆಯನ್ನು ನೀಡುತ್ತಿದ್ದಾರೆ.





- ಶಿಬಾಜೆ ಗ್ರಾಮದ ಐಂಗುಡ ನಿವಾಸಿ 83 ವರ್ಷದ ವಾಸು ರಾಣ್ಯರವರು ಕಟ್ಟಿಗೆ ತರಲೆಂದು ಸಮೀಪದ ಕಾಡಿಗೆ ತೆರಳಿ ನಾಪತ್ತೆಯಾಗಿದ್ದು ಅವರನ್ನು ಸಾಕಷ್ಟು ಹುಡುಕಾಡಿ ಆರು ದಿನಗಳ ಬಳಿಕ ಸ್ಥಳೀಯ ಭಂಡಿಹೊಳೆ ಕಾಡಿನಲ್ಲಿ ಪತ್ತೆ ಹಚ್ಚಿ ಮನೆಯವರಿಗೆ ಒಪ್ಪಿಸುವಲ್ಲಿ ಶೌರ್ಯ ಸ್ವಯಂಸೇವಕರು ಯಶಸ್ವಿಯಾಗಿದ್ದಾರೆ.

- ಶೌರ್ಯ ತಂಡದ ಪ್ರೇರಣೆಯಿಂದ ಬಹಳಷ್ಟು ಮಂದಿ ನಾಯಕತ್ವ ಕೌಶಲ್ಯವನ್ನು ಪಡೆದು ಜನಪ್ರತಿನಿಧಿಗಳಾಗಿರುತ್ತಾರೆ. ರಾಜಕೀಯ, ಸಂಘ ಸಂಸ್ಥೆ, ಒಕ್ಕೂಟ, ಶಾಲೆಗಳಲ್ಲಿ ನಾಯಕತ್ವ ನೀಡುತ್ತಿದ್ದಾರೆ. ಆಪದ್‌ಮಿತ್ರ ತರಬೇತಿಯಲ್ಲಿಯೂ ಭಾಗವಹಿಸಿರುತ್ತಾರೆ. ಸ್ಥಳೀಯವಾಗಿ ಜನರು ನೇರ ಸ್ವಯಂಸೇವಕರನ್ನೇ ಕರೆದು ಸಹಕಾರಕ್ಕಾಗಿ ವಿನಂತಿಸುತ್ತಿದ್ದಾರೆ. ಹೀಗೆ ಸಮಾಜದಲ್ಲಿ ಗುರುತಿಸುವ ವ್ಯಕ್ತಿಗಳಾಗಿ ಕೆಲಸ ಮಾಡುತ್ತಿರುವುದು ಸಂತೋಷದಾಯಕವಾಗಿದೆ.
- ಶೌರ್ಯ ತಂಡದ ಸ್ವಯಂಸೇವಕರಿಗೆ ಪಥ ಸಂಚಲನ, ಶಿಸ್ತಿನ ಪಾಠವನ್ನು ಹೇಳಿಕೊಡಲಾಗುತ್ತಿದೆ. ಇದರ ಪರಿಣಾಮವಾಗಿ 15ಕ್ಕೂ ಹೆಚ್ಚಿನ ಸ್ವಯಂಸೇವಕರು ದೇಶ ಸೇವೆಗೆ ಸೈನಿಕರಾಗಿ, 3ಕ್ಕೂ ಹೆಚ್ಚಿನ ಸ್ವಯಂಸೇವಕರು ಪೊಲೀಸು ಇಲಾಖೆಗೆ ಸೇರಿರುವ ವರದಿ ಬಂದಿರುತ್ತದೆ.
- ಈ ಬಾರಿ ವಿಶೇಷವಾಗಿ ಮಾತೃಶ್ರೀ ಹೇಮಾವತಿ ವೀ. ಹೆಗ್ಗಡೆಯವರ ಪ್ರೇರಣೆ ಮತ್ತು ಮಾರ್ಗದರ್ಶನದಲ್ಲಿ ಶೌರ್ಯ ಸ್ವಯಂಸೇವಕರು ಬಡ ಕುಟುಂಬದ ಮನೆ ರಿಪೇರಿ, ಮನೆ ಕಟ್ಟಲು ಶ್ರಮದಾನ ಹಾಗೂ ಯೋಜನೆಯ ವಾತ್ಸಲ್ಯ ಮನೆ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡಿರುತ್ತಾರೆ. ಒಟ್ಟು 981 ಮನೆ ರಿಪೇರಿ ಮತ್ತು ಶ್ರಮದಾನ, 79 ವಾತ್ಸಲ್ಯ ಮನೆಗಳಿಗೆ ಸಹಕಾರ ನೀಡಿರುತ್ತಾರೆ.



- ಪೂಜ್ಯರು ವಿಶೇಷವಾಗಿ 'ಶೌರ್ಯ ಲೋಗೊ'ವನ್ನು ಬಿಡುಗಡೆಗೊಳಿಸಿದ್ದು, ಈ ಲೋಗೊವನ್ನು ಸಮವಸ್ತ್ರ, ಕ್ಯಾಪ್ ಮತ್ತು ಕಾರ್ಯಕ್ರಮಗಳಲ್ಲಿ ಬಳಸಲಾಗುತ್ತಿದೆ.
- ಪ್ರತಿಯೊಂದು ಘಟಕಗಳ ವರದಿಯನ್ನು ಕ್ರೋಢೀಕರಿಸಿ ಘಟಕಗಳಿಗೆ ಶ್ರೇಣಿಯನ್ನು ನೀಡಿ ಸಮಾಜ ಸೇವೆಯಲ್ಲಿ ಪೈಪೋಟಿ ಬರುವಂತೆ ಪ್ರೋತ್ಸಾಹಿಸಲಾಗುತ್ತಿದೆ.
- ಶೌರ್ಯ ಕಾರ್ಯಕ್ರಮವನ್ನು ಸರಕಾರದ ಸಹಭಾಗಿತ್ವದಲ್ಲಿ ಅನುಷ್ಠಾನ ಮಾಡಲು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (SDMA), 'ವರುಣ ಮಿತ್ರ' ವೆದರ್ ಸ್ಟೇಷನ್ (ಕರ್ನಾಟಕ ರಾಜ್ಯ ಹವಾಮಾನ ಪರಿಸ್ಥಿತಿಗಳ ಬಗ್ಗೆ ಮಾಹಿತಿ ನೀಡುವ ಸಂಸ್ಥೆ), ಕೆ.ಎಸ್.ಎನ್.ಡಿ.ಎನ್.ಸಿ (ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ), ಯುನಿಸೆಫ್ ಸಂಸ್ಥೆಯ ಸಹಕಾರವನ್ನು ಕೋರಲಾಗಿದೆ.

- **ವಿಪತ್ತು ನಿರ್ವಹಣೆಯ (Emergency Preparedness and Response Training) ತರಬೇತಿ ಕಾರ್ಯಾಗಾರ :**

ಹೈದರಾಬಾದ್‌ನ ಮರ್ಕ್ಯೂರಿ ಹೋಟೆಲ್‌ನಲ್ಲಿ ನಡೆದಿದ್ದು ಯೂನಿಸೆಫ್ ಸಂಸ್ಥೆ ನೀಡಿದ ಆಹ್ವಾನದ ಮೇರೆಗೆ ಕಾರ್ಯಾಗಾರದಲ್ಲಿ ಭಾಗವಹಿಸಲಾಯಿತು. ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳು, ಸರ್ಕಾರದ ವಿವಿಧ ಇಲಾಖೆಗಳ ಸಿಬ್ಬಂದಿಗಳು, ಯೂನಿಸೆಫ್ ಸಂಸ್ಥೆಯ ಅಧಿಕಾರಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಡಾ. ಜಲಾಲೆಮ್, ಮುಖ್ಯಸ್ಥರು, ಯೂನಿಸೆಫ್ ಸಂಸ್ಥೆ, ಹೈದರಾಬಾದ್ ಕ್ಷೇತ್ರ, ಸರಬ್‌ಜಿತ್ ಎಸ್. ಎಸ್, ಎಮರ್ಜೆನ್ಸಿ ಸ್ಪೆಸಲಿಸ್ಟ್, ಐ.ಸಿ.ಓ ದೆಹಲಿ, ಯೂನಿಸೆಫ್ ದಕ್ಷಿಣ ಭಾರತದ ಪ್ರತಿನಿಧಿ ಶ್ರೀ ಮಹೇಂದ್ರ ರಾಜಾರಾಮ್ ಉಪಸ್ಥಿತರಿದ್ದರು.



**ನೈಸರ್ಗಿಕ ವಿಕೋಪ ಉಸ್ತುವಾರಿ ಸ್ವಯಂಸೇವಾ ಸಂಸ್ಥೆಗಳ ಸಭೆ:**

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಬೆಂಗಳೂರು, ಇದರ ಪ್ರಾಯೋಜಕತ್ವದಲ್ಲಿ ನಡೆಸಲಾದ ಈ ಸಭೆಯಲ್ಲಿ 50ಕ್ಕೂ ಹೆಚ್ಚಿನ ಸಂಬಂಧಪಟ್ಟ ಸಂಸ್ಥೆಗಳ ಮುಖ್ಯಸ್ಥರು ಪಾಲ್ಗೊಂಡಿದ್ದರು. ಈ ಸಭೆಯಲ್ಲಿ ಶೌರ್ಯ ವಿಪತ್ತು ನಿರ್ವಹಣೆಗೆ ಸಂಬಂಧಿಸಿದ ಮಾಹಿತಿಯನ್ನು ನೀಡಲಾಯಿತು. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ನಿರ್ದೇಶಕರಾದ ಶ್ರೀ ಕರೆ ಗೌಡ, ಫಿವೋರ್ಡ್ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಚಂದ್ರಗುರು, ಯೂನಿಸೆಫ್ ಸಂಸ್ಥೆಯ ಶ್ರೀ ಮಹೇಂದ್ರ ರಾಜಾರಾಮನ್, ಡಾ. ರೀಟಾ, ಡಾ. ರಶ್ಮೀ ಹಾಗೂ ರಾಜ್ಯದ ವಿವಿಧ ಜಿಲ್ಲೆಗಳಿಂದ ಸ್ವಯಂಸೇವಾ ಸಂಸ್ಥೆಯ ಮುಖ್ಯಸ್ಥರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

- ಸ್ವಯಂಸೇವಕರ ಮಾಹಿತಿಗಾಗಿ ಪುಸ್ತಕ, ಕೈಪಿಡಿ, ಮಾಹಿತಿ ಪತ್ರ, ಪೋಸ್ಟರ್, ಬ್ಲಾಗ್, ಸಮೂಹ ಮಾಧ್ಯಮಗಳಲ್ಲಿ ಮಾಹಿತಿಯನ್ನು ನೀಡಿ ಸ್ವಯಂಸೇವಕರಿಗೆ ಮತ್ತು ಸಮಾಜಕ್ಕೆ ಶೌರ್ಯ ಕಾರ್ಯಕ್ರಮದಿಂದಾದ ಸಾಧನೆಯ ಪರಿಚಯ ಮಾಡಲಾಗುತ್ತಿದೆ.
- ಹೊನ್ನಾವರ, ಕುಮಟಾ ಮತ್ತು ಅಂಕೋಲಾ ತಾಲ್ಲೂಕಿನ ಪ್ರವಾಹ ಸಂದರ್ಭದ ಸ್ವಯಂಸೇವಕರ ಕಾರ್ಯಾಚರಣೆಗಳ ವೀಡಿಯೋ ಚಿತ್ರೀಕರಣವನ್ನು ಮಾಡಿಸಲಾಗಿದೆ.
- ಶೌರ್ಯ ಕಾರ್ಯಕ್ರಮವನ್ನು ಜನಜಾಗೃತಿ ಪ್ರಾದೇಶಿಕ ವಿಭಾಗದ ಮೂಲಕ ನಿರ್ವಹಿಸುತ್ತಿದ್ದು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ (ರಿ.) ಇದರ ಅನುದಾನದಲ್ಲಿ ನಡೆಸಲಾಗುತ್ತಿದೆ. ಶ್ರೀ ಜೈವಂತ್ ಪಟಗಾರ್ ಹಾಗೂ ಶ್ರೀ ಕಿಶೋರ್ ಕುಮಾರ್‌ರವರು ಪ್ರಾದೇಶಿಕ ವಿಭಾಗದ ಶೌರ್ಯ ಕಾರ್ಯಕ್ರಮಗಳ ಯೋಜನಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದು, ಕನಿಷ್ಠ ಅವಧಿಯಲ್ಲಿ ಶೌರ್ಯ ಕಾರ್ಯಕ್ರಮ ಸಮಾಜದ ಅಗತ್ಯದ ಕಾರ್ಯಕ್ರಮವಾಗಿ ಗುರುತಿಸಲ್ಪಟ್ಟಿದೆ. ಈ ಕಾರ್ಯಕ್ರಮಕ್ಕೆ ಯೋಜನೆಯ ಎಲ್ಲಾ ಬಳಗದವರು ಆಸಕ್ತಿಯಿಂದ ಕೈಜೋಡಿಸುತ್ತಿದ್ದಾರೆ.



**"ಆಪತ್ತು ಬಂದಾಗ ಸಹಕರಿಸುವವನು ದೇವರಿಗೆ ಸಮಾನ. ಧನ, ಧಾನ್ಯ, ಸಂಪತ್ತು ಶಾಶ್ವತವಲ್ಲ, ಸೇವಾ ಮನೋಭಾವನೆಯಿಂದ ಸಂಪಾದಿಸಿದ ಪುಣ್ಯ ಶಾಶ್ವತವಾಗಿದೆ."**

**– ಡಾ। ಹೇಮಾವತಿ ವೀ. ಹೆಗ್ಗಡೆಯವರು**
**ಅಧ್ಯಕ್ಷರು, ಜ್ಞಾನವಿಕಾಸ ಮಹಿಳಾ ಕಾರ್ಯಕ್ರಮ**

## 3. ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮ

ಸುಂದರ ನದಿ, ವನಗಳ ನಾಡಾದ ಕರ್ನಾಟಕ ಇಂದು ಹವಾಮಾನ ವೈಪರೀತ್ಯದಿಂದಾಗಿ ತಾಪಮಾನವನ್ನು ಹೆಚ್ಚಿಸಿಕೊಂಡು ತತ್ತರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಆಧುನಿಕತೆಯ ಹೆಸರಲ್ಲಿ ಗಿಡ ಮರಗಳ ನಾಶ, ವಾಯುಮಾಲಿನ್ಯ, ಪರಿಸರ ಮಾಲಿನ್ಯದಿಂದ ಕಾಲಮಾನಗಳಲ್ಲಿ ಬರಬೇಕಾದ ಮಳೆ ಬೆಳೆಗಳಲ್ಲಿ ವ್ಯತ್ಯಾಸಗಳು ಬಂದು ಜನಜೀವನ, ಆರೋಗ್ಯದಲ್ಲಿ ಸಮಸ್ಯೆ ಸೃಷ್ಟಿಯಾಗಿದೆ. ಕಾಡು ಪ್ರಾಣಿಗಳು ಆಹಾರವನ್ನು ಬಯಸಿ ಅರಣ್ಯದಂಚಿನಲ್ಲಿ ರೈತರು ಬೆಳೆದ ಬೆಳೆಯನ್ನು ನಾಶಪಡಿಸುತ್ತಿದ್ದು, ಜನರ ಓಡಾಟಕ್ಕೆ ಆತಂಕ ಸೃಷ್ಟಿಯಾಗುತ್ತಿರುವುದನ್ನು ಗಮನಿಸಿ ಪ್ರಾಣಿ, ಪಕ್ಷಿಗಳಿಗೆ ಆಹಾರ ಲಭ್ಯವಾಗುವಂತೆ ಹಣ್ಣು-ಹಂಪಲುಗಳ ಗಿಡಗಳನ್ನು ಕಾಡಿನಲ್ಲಿ ನೆಡುವ ಮೂಲಕ, ಕುಡಿಯಲು ನೀರು ಒದಗಿಸುವ ಮೂಲಕ ವನ್ಯಜೀವಿಗಳ ಸಂರಕ್ಷಣೆ ಮಾಡುವ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ನಡೆಸಲಾಗುತ್ತಿದೆ. 'ಹಸಿರು ಬೆಳೆಸಿ, ಉಸಿರು ಉಳಿಸಿ' ಎನ್ನುವ ಸಂದೇಶ ಸಮಸ್ತ ಜನರಲ್ಲಿ ಮನದಟ್ಟು ಮಾಡುವ ಉದ್ದೇಶ ನಮ್ಮದಾಗಿದೆ. ಇಂದಿನ ಮತ್ತು ಮುಂದಿನ ಪೀಳಿಗೆಗಾಗಿ ನಿರಂತರವಾಗಿ ಅರಣ್ಯವನ್ನು ಸಂರಕ್ಷಿಸುವುದು, ನಿರ್ವಹಿಸುವುದು, ಅಭಿವೃದ್ಧಿಪಡಿಸುವುದು ಮತ್ತು ಮರಗಳನ್ನು ಬೆಳೆಸುವುದು ಕಾರ್ಯಕ್ರಮದ ಧ್ಯೇಯವಾಗಿದೆ.




ಧರ್ಮಸ್ಥಳದ ದಡಂತಮಲೆ ಅರಣ್ಯ ಪ್ರದೇಶದಲ್ಲಿ ಮಿಯಾವಾಕಿ ಮಾದರಿಯ ಕಾಡು ರಚನೆ. ಕಾಡಿನಲ್ಲಿ ಹಣ್ಣಿನ ಬೀಜಗಳ ಬಿತ್ತನೆ ಮೂಲಕ 'ಬಿತ್ತೋತ್ಸವ' ಕಾರ್ಯಕ್ರಮಗಳು. 'ಶೌರ್ಯ' ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಸ್ವಯಂಸೇವಕರಿಂದ ಗಿಡನಾಟಿ ಕಾರ್ಯಕ್ರಮ. 'ಶೌರ್ಯ ವನ' ನಿರ್ಮಾಣ. ಬೀಜದುಂಡೆಗಳು, ತರಕಾರಿ, ಬಳ್ಳಿ, ಹಾಗೂ ಹಣ್ಣು-ಹಂಪಲುಗಳ ಬೀಜ ಬಿತ್ತನೆ ಕಾರ್ಯಕ್ರಮ. ಶಾಲಾವನ, ದೇವರ ಕಾಡು, ಔಷಧಿ ವನ, ಶೌರ್ಯ ವನ, ಹಣ್ಣು ಹಂಪಲ ವನ, ಪ್ರಗತಿ ವನ, ವಾಣಿಜ್ಯ ವನ, ರುದ್ರಭೂಮಿಯಲ್ಲಿ ವನ, ಸಾಲುಮರ, ಹೀಗೆ ವಿವಿಧ ವನಗಳ ರಚನೆಗೆ ಪ್ರೋತ್ಸಾಹ. ಪರಿಸರ ಸ್ನೇಹಿ ಸಾಧಕರಿಗೆ ಸನ್ಮಾನ, ಇತ್ಯಾದಿ ನಡೆಸಲಾಗಿದೆ.

500ಕ್ಕೂ ಮಿಕ್ಕಿದ ಕೆರೆಯಂಗಳದಲ್ಲಿ ಗಿಡನಾಟಿ ಮಾಡಿ ವನ ನಿರ್ಮಾಣ ಮಾಡಲಾಗಿದೆ. ರೈತರಿಗೆ 8 ಲಕ್ಷಕ್ಕೂ ಮಿಕ್ಕಿದ ಗೇರು ಸಸಿಗಳನ್ನು ವಿತರಿಸಲಾಗಿದೆ. ಸರಕಾರದ ಮೂಲಕ ಹಣ್ಣು ಹಂಪಲು ಮಾದರಿ ನೆಡುತೋಪುಗಳ ರಚನೆಯಲ್ಲಿ ಸಹಕರಿಸಲಾಗಿದೆ. ಪ್ರಾಣಿ ಪಕ್ಷಿಗಳಿಗೆ ಬಿಸಿಲ ಬೇಗೆಯಲ್ಲಿ ಆಹಾರ ನೀರಿನ ಪೂರೈಕೆ ಮಾಡಲಾಗಿದೆ. ಪರಿಸರ ಸ್ವಚ್ಛತೆಯ ಕಾರ್ಯಕ್ರಮಗಳನ್ನು ಆಯೋಜಿಸಿ ಪರಿಸರ ಜಾಗೃತಿ ಮತ್ತು ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ಧರ್ಮಸ್ಥಳದ ತೋಟಗಾರಿಕಾ ನರ್ಸರಿಯಲ್ಲಿ ಹಣ್ಣು ಹಂಪಲಿನ ಗಿಡಗಳನ್ನು ಬೆಳೆಸಿ ಅರಣ್ಯ ಪ್ರದೇಶದಲ್ಲಿ ನಾಟಿ ಮಾಡಲಾಗಿದೆ. ಶಾಲಾ ಮಕ್ಕಳಲ್ಲಿ ಅರಣ್ಯ ಮತ್ತು ಪರಿಸರ ಸಂರಕ್ಷಣೆಯ ಕಾಳಜಿ ಹುಟ್ಟು ಹಾಕುವ ಉದ್ದೇಶದಿಂದ



ಶಾಲಾ ಮಕ್ಕಳಿಂದ ಹಣ್ಣು ಹಂಪಲಿನ ಮರಗಳ ಬೀಜ ಸಂಗ್ರಹ, ಬಿತ್ತೋತ್ಸವ ಮತ್ತು ಗಿಡನಾಟಿ ಕಾರ್ಯಕ್ರಮಕ್ಕೆ ತೊಡಗಿಸಿಕೊಳ್ಳಲು ಅವಕಾಶ ನೀಡಲಾಗಿದೆ. ವನಸಂವರ್ಧನೆ, ಪರಿಸರ ಕಾಳಜಿ ಮತ್ತು ಸ್ವಚ್ಛತಾ ಅರಿವು, ಹಸಿರು ಇಂಧನ ಅಥವಾ ಪರ್ಯಾಯ ಇಂಧನ ಕಾರ್ಯಕ್ರಮ, ಜಲಾನಯನ ಕಾರ್ಯಕ್ರಮ, ಆಧುನಿಕ ಕೃಷಿ ಪದ್ಧತಿ, ರುದ್ರಭೂಮಿ ಅಭಿವೃದ್ಧಿ, ನಮ್ಮೂರು ನಮ್ಮ ಕೆರೆ, ನಾಗರಿಕ ಪ್ರಜ್ಞೆ ಮತ್ತು ಸ್ವಚ್ಛತಾ ಕಾರ್ಯಕ್ರಮಗಳು ಹೀಗೆ ವಿವಿಧ ಮಾದರಿಗಳಲ್ಲಿ ಪರಿಸರ ಸಂರಕ್ಷಣೆಗೆ ವಿಶೇಷ ಆದ್ಯತೆ ನೀಡಿ ಪ್ರಕೃತಿಯನ್ನು ಉಳಿಸುವ ಹೊಣೆಗಾರಿಕೆಯನ್ನು ಪ್ರತಿಯೊಬ್ಬರಲ್ಲಿಯೂ ಜಾಗೃತವಾಗುವಂತೆ ಯೋಜನೆಯು ಕಾರ್ಯನಿರ್ವಹಿಸುತ್ತಿದೆ.

- **10 ಸಾವಿರ ಎಕ್ರೆ ಭೂಪ್ರದೇಶದಲ್ಲಿ 10 ಲಕ್ಷಕ್ಕೂ ಮಿಕ್ಕಿದ ಗಿಡನಾಟಿ :**

2024-25ನೇ ಸಾಲಿನಲ್ಲಿ ಯೋಜನೆಯ 'ದಶಲಕ್ಷ ಗಿಡಗಳ ನಾಟಿ' ಕಾರ್ಯಕ್ರಮದ ಪ್ರಯುಕ್ತ ರಾಜ್ಯದಲ್ಲಿ ಕಾರ್ಯಕ್ರಮಗಳಿಗೆ ಸುಮಾರು 1 ಕೋಟಿ ಅನುದಾನವನ್ನು ಮೀಸಲಿಡಲಾಗಿದೆ. ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಗಿಡನಾಟಿ ಮಾಡುವ ಕಾರ್ಯಕ್ರಮವನ್ನು ಪರಿಸರ ದಿನಾಚರಣೆಯ ಸಂದರ್ಭದಲ್ಲಿಯೇ ಪ್ರಾರಂಭಿಸಿದ್ದು, ರಾಜ್ಯದಲ್ಲಿ ಈ ವರ್ಷದಲ್ಲಿ ಸುಮಾರು 2,368 ಕಾರ್ಯಕ್ರಮಗಳನ್ನು ಆಯೋಜಿಸಿ 5,29,637 ಗಿಡನಾಟಿ ಮಾಡಿರುವುದು ದಾಖಲೆಯಾಗಿದೆ.



- **ದಶಲಕ್ಷ ಗಿಡನಾಟಿ ಕಾರ್ಯಕ್ರಮ:**

ಬಂಟ್ವಾಳ ತಾಲೂಕು ಕಾವಳಪಡೂರು, ಸಾಲು ಮರದ ತಿಮ್ಮಕ್ಕ ವೃಕ್ಷ ಉದ್ಯಾನವನ, ಆಲಂಪುರಿಯಲ್ಲಿ ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮದಡಿ ವರದಿ ವರ್ಷದ ದಶಲಕ್ಷ ಗಿಡಗಳ ನಾಟಿ ಕಾರ್ಯಕ್ರಮಕ್ಕೆ ಪೂಜ್ಯರು ಚಾಲನೆ ನೀಡಿರುತ್ತಾರೆ. ಅರಣ್ಯ ಸಚಿವರಾದ ಶ್ರೀ ಈಶ್ವರ ಖಂಡ್ರೆಯವರು, ಬಂಟ್ವಾಳ ಶಾಸಕರಾದ ಶ್ರೀ ಯು. ರಾಜೇಶ್ ನಾಯಕ್, ಮಾಜಿ ಸಚಿವರಾದ ಶ್ರೀ ರಮಾನಾಥ್ ರೈ. ಮಂಗಳೂರು ವೃತ್ತ ಅರಣ್ಯಾಧಿಕಾರಿಗಳಾದ ಡಾ. ವಿ. ಕರಿಕಾಲನ್, ಮಂಗಳೂರು ವಿಭಾಗ ಅರಣ್ಯಾಧಿಕಾರಿಯಾದ ಶ್ರೀ ಅಂಟೋನಿ ಮಾರಿಯಪ್ಪ ವೈಕೆ., ಮಂಗಳೂರು ಉಪವಿಭಾಗದ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಶ್ರೀಧರ್, ಗ್ರಾಮ ಪಂಚಾಯತ್ ಕಾವಳಪಡೂರು ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ಶರ್ಮ, ವಲಯ ಅರಣ್ಯಾಧಿಕಾರಿ ಶ್ರೀ ಪ್ರಫುಲ್ ಶೆಟ್ಟಿ, ಯೋಜನೆಯ ಕಾರ್ಯನಿರ್ವಾಹಕ





ನಿರ್ದೇಶಕರಾದ ಶ್ರೀ ಅನಿಲ್ ಕುಮಾರ್ ಎಸ್.ಎಸ್. ಕಾರ್ಯಕ್ರಮದಲ್ಲಿದ್ದರು. ನೆಲ, ಜಲ, ಪ್ರಾಣಿ ಸಂಕುಲ ಮತ್ತು ವನಸಂರಕ್ಷಣೆಯ ಪ್ರಯುಕ್ತ ಹಮ್ಮಿಕೊಳ್ಳಲಾದ ಈ ಕಾರ್ಯಕ್ರಮದಲ್ಲಿ 2 ಸಾವಿರ ಗಿಡಗಳನ್ನು ಶೌರ್ಯ ಸ್ವಯಂಸೇವಕರು ನಾಟಿ ಮಾಡಿ ಸಹಕರಿಸಿದರು.

- **ಕೂಡಿಗೆ ಅರಣ್ಯ ಪ್ರದೇಶದಲ್ಲಿ ಬೃಹತ್ ಗಿಡನಾಟಿ ಕಾರ್ಯಕ್ರಮ:**

ಶೃಂಗೇರಿ ತಾಲೂಕು ಗ್ರಾಮಾಭಿವೃದ್ಧಿ ಯೋಜನೆ, ಶೌರ್ಯ ವಿಪತ್ತು ನಿರ್ವಹಣೆ ಮತ್ತು ಅರಣ್ಯ ಇಲಾಖೆ ಶೃಂಗೇರಿಯ ಸಹಭಾಗಿತ್ವದಲ್ಲಿ ಹೆಗ್ಗರೂ ಕೂಡಿಗೆ ಅರಣ್ಯ ಪ್ರದೇಶದಲ್ಲಿ 5000 ಗಿಡಗಳ ನಾಟಿ ಕಾರ್ಯಕ್ರಮ ನಡೆಸಲಾಗಿದೆ.

- **ಕಾನೂನು ಅರಿವು ಮತ್ತು ಪರಿಸರ ಜಾಗೃತಿ ಕಾರ್ಯಕ್ರಮ:**

ಘಟಕನೂರ್ ವಲಯದ ಸುರೇಬಾನ್ ಪೊಲೀಸ್ ಸ್ಟೇಷನ್ ಆವರಣದಲ್ಲಿ ಪರಿಸರ ಜಾಗೃತಿ ಹಾಗೂ ಗಿಡನಾಟಿ ಕಾರ್ಯಕ್ರಮ ನಡೆಸಲಾಯಿತು. ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಶ್ರೀ ಶಿವಾಜಿ ಪವಾರ್ ಸಾರ್ವಜನಿಕರಿಗೆ ಕಾನೂನು ಅರಿವು ಹಾಗೂ ಪರಿಸರ ಜಾಗೃತಿ ಮೂಡಿಸಿ ಶುಭ ಹಾರೈಸಿದರು.

**ಸಾಮಾಜಿಕ ಅರಣ್ಯೀಕರಣ ಯೋಜನೆಯಡಿ ನಡೆಸಿದ ಸಾಧನೆಯ ವಿವರ**

| ಕ್ರ. ಸಂ. | ವಿವರ | 2021-22 | 2022-23 | 2023-24 | 2024-25 | ಒಟ್ಟು |
|---|---|---|---|---|---|---|
| 1. | ನಡೆಸಿದ ಕಾರ್ಯಕ್ರಮಗಳು | 1,864 | 2,528 | 1,737 | 2,368 | 8,497 |
| 2. | ನಾಟಿ ಮಾಡಿದ ಹಣ್ಣಿನ ಗಿಡಗಳು | 55,838 | 1,84,561 | 1,30,008 | 1,24,838 | 4,95,245 |
| 3. | ನಾಟಿ ಮಾಡಿದ ಇತರ ಗಿಡಗಳು | 60,162 | 4,67,736 | 2,06,038 | 4,04,799 | 11,38,735 |
| 4. | ಒಟ್ಟು ಗಿಡಗಳ ಸಂಖ್ಯೆ | 1,16,000 | 6,52,297 | 3,36,046 | 5,29,637 | 16,33,980 |
| 5. | ವಿಸ್ತೀರ್ಣ (ಎಕ್ರೆ) | 1,343 | 2,918 | 3,050 | 3,810 | 11,121 |
| 6. | ಯೋಜನಾ ಕಚೇರಿಯಿಂದ ಖರ್ಚಾದ ಮೊತ್ತ | 11,50,653/- | 20,72,340/- | 32,51,705/- | 11,62,000/- | 76,36,698/- |
| 7. | ವಿಪತ್ತು ನಿರ್ವಹಣೆ ಬಜೆಟ್‌ನಿಂದ ಖರ್ಚಾದ ಮೊತ್ತ | 2,51,900/- | 86,725/- | - | - | 3,38,625/- |



"ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆ ಇಡೀ ಜಗತ್ತಿಗೆ ಸವಾಲಾಗಿರುವ ಈ ಕಾಲಘಟ್ಟದಲ್ಲಿ ಪರಿಸರ ಸಂರಕ್ಷಣೆ ಮಾತ್ರ ಸಮೃದ್ಧ ಬದುಕಿಗೆ ಸೋಪಾನವಾಗುತ್ತದೆ. ಮಾನವ-ಕಾಡುಪ್ರಾಣಿ ಸಂಘರ್ಷವೇ ಹೆಚ್ಚಾಗುತ್ತಿದ್ದು, ಅಭಿವೃದ್ಧಿಯ ಜೊತೆಗೆ ನೆಲ, ಜಲ, ಪ್ರಾಣಿ ಮತ್ತು ವನಸಂರಕ್ಷಣೆಯ ಕಾಳಜಿಯ ಸುಸ್ಥಿರ ಅಭಿವೃದ್ಧಿ ನಮ್ಮ ಸಂಕಲ್ಪವಾಗಬೇಕು. ಪರಿಸರ ದಿನ, ವನಮಹೋತ್ಸವ ದಿನದಂದು ಮಾತ್ರ ಸಸಿ ನೆಟ್ಟು ನಮ್ಮ ಪರಿಸರ ಪ್ರೇಮ ಮರೆದರೆ ಸಾಲದು. ಅದು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಬೇಕು. ಪ್ರತಿಯೊಬ್ಬರು ತಮ್ಮ ಮನೆಯ ಮುಂದೆ ಒಂದು ಗಿಡನೆಟ್ಟು ಪೋಷಿಸಬೇಕು. ಅರಣ್ಯದಲ್ಲಿ ಪಶು, ಪಕ್ಷಿಗಳಿಗೆ ಆಹಾರ ನೀಡುವ, ಫಲ ನೀಡುವ ವೃಕ್ಷನಾಟಿ ಮಾಡುವ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಈ ಯೋಜನೆ ಫಲಪ್ರದ ಕಾರ್ಯಕ್ರಮವಾಗಿದೆ."

– ಶ್ರೀ ಈಶ್ವರ ಬಿ. ಖಂಡ್ರೆ
ರಾಜ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

# ಧನ್ಯವಾದ ಸಮರ್ಪಣೆ

ಜನಜಾಗೃತಿ ಪ್ರಾದೇಶಿಕ ವಿಭಾಗದ ಕಾರ್ಯಚಟುವಟಿಕೆಗಳ ಮೇಲೆ ವಿಶೇಷ ಕಾಳಜಿ, ಆಶೀರ್ವಾದ ಮತ್ತು ಮಾರ್ಗದರ್ಶನವನ್ನು ನೀಡುತ್ತಿರುವ ಪೂಜ್ಯ ಡಾ|| ಡಿ. ವೀರೇಂದ್ರ ಹೆಗ್ಗಡೆಯವರಿಗೆ, ನಮ್ಮ ಯಶಸ್ಸಿಗೆ ಮಾತೃ ವಾತ್ಸಲ್ಯದಿಂದ ಸ್ಫೂರ್ತಿ ತುಂಬುವ ಮಾತೃಶ್ರೀ ಹೇಮಾವತಿ ವೀ. ಹೆಗ್ಗಡೆಯವರಿಗೆ ಭಕ್ತಿಪೂರ್ವಕ ನಮನಗಳು.

ನಮ್ಮ ಯಶಸ್ಸಿನಲ್ಲಿ ಸದಾ ಪ್ರೇರಕರಾಗಿರುವ ಶ್ರೀ ಡಿ. ಹರ್ಷೇಂದ್ರ ಕುಮಾರ್, ಶ್ರೀ ಡಿ. ಸುರೇಂದ್ರ ಕುಮಾರ್, ಶ್ರೀ ಡಿ. ರಾಜೇಂದ್ರ ಕುಮಾರ್, ಶ್ರೀ ಶ್ರೇಯಸ್ ಕುಮಾರ್, ಟ್ರಸ್ಟಿಗಳಾದ ಶ್ರೀಮತಿ ಶ್ರದ್ಧಾ ಅಮಿತ್, ಶ್ರೀ ಅನಿಲ್ ಕುಮಾರ್ ಎಸ್.ಎಸ್., ಡಾ| ಪಿ.ವಿ. ಭಂಡಾರಿ ಉಡುಪಿ, ಡಾ| ಶ್ರೀನಿವಾಸ್ ಭಟ್, ಮಂಗಳೂರು, ಶ್ರೀ ವಿ. ರಾಮಸ್ವಾಮಿ, ವೇದಿಕೆಯ ರಾಜ್ಯ ಸಂಘಟನಾ ಅಧ್ಯಕ್ಷರಾದ ಶ್ರೀ ನಟರಾಜ್ ಬಾದಾಮಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಅನಿಲ್ ಕುಮಾರ್ ಎಸ್.ಎಸ್, ಮುಖ್ಯ ಹಣಕಾಸು ನಿರ್ದೇಶಕರಾದ ಶ್ರೀ ಶಾಂತಾರಾಮ ಪೈ., ರವರಿಗೂ ವಂದನೆಗಳು. ವೇದಿಕೆಯ ಸ್ಥಾಪಕಾಧ್ಯಕ್ಷರು, ನಿಕಟಪೂರ್ವ ರಾಜ್ಯಾಧ್ಯಕ್ಷರುಗಳು, ರಾಜ್ಯದ ಎಲ್ಲಾ ಹಾಲಿ ಮತ್ತು ಮಾಜಿ ಜಿಲ್ಲಾ ಸಂಘಟನಾ ಅಧ್ಯಕ್ಷರುಗಳು, ತಾಲೂಕು ಸಂಘಟನಾ ಅಧ್ಯಕ್ಷರುಗಳು, ಕೋ-ಆಪ್ಟ್ ಸದಸ್ಯರು, ಪದಾಧಿಕಾರಿಗಳು, ಯೋಜನೆಯ ಪ್ರಾದೇಶಿಕ ನಿರ್ದೇಶಕರುಗಳು, ನಿರ್ದೇಶಕರುಗಳು, ಯೋಜನಾಧಿಕಾರಿಗಳು, ಕಾರ್ಯಕರ್ತರು, ಸೇವಾಪ್ರತಿನಿಧಿಗಳು, ಪೋಷಕರು, ನವಜೀವನ ಸದಸ್ಯರು ಮತ್ತು ಜನಜಾಗೃತಿ ಪ್ರಾದೇಶಿಕ ವಿಭಾಗದ ಯೋಜನಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗಕ್ಕೆ ಮನದಾಳದ ಕೃತಜ್ಞತೆಗಳು.

ಜನಜಾಗೃತಿ ವೇದಿಕೆಯ ಹಾಗೂ ಪ್ರಾದೇಶಿಕ ವಿಭಾಗದ ಕಾರ್ಯಕ್ರಮಗಳ ಯಶಸ್ಸಿಗೆ ಸಹಕಾರ ನೀಡುತ್ತಿರುವ ಎಲ್ಲಾ ಹಿತೈಷಿಗಳಿಗೆ, ದಾನಿಗಳಿಗೆ, ವೇದಿಕೆಯ ಕಾರ್ಯಚಟುವಟಿಕೆಗಳ ಸಂಯೋಜನೆಯಲ್ಲಿ ಸಹಕರಿಸುತ್ತಿರುವ ಶ್ರೀ ವೀರು ಶೆಟ್ಟಿ ಧರ್ಮಸ್ಥಳ, ಶ್ರೀ ಕೃಷ್ಣ ಸಿಂಗ್, ಶ್ರೀ ರಾಜೇಂದ್ರ ದಾಸ್, ಶ್ರೀ ಸುನಿಲ್ ಬೇಕಲ್, ಶ್ರೀ ಮಹಾವೀರ ಅಜ್ರಿ, ಶ್ರೀ ಪಾರ್ಶ್ವನಾಥ್, ಶ್ರೀ ಸುಬ್ರಹ್ಮಣ್ಯ ಪ್ರಸಾದ್, ಶ್ರೀ ದೀಕ್ಷಿತ್, ದೇವಳ ಸಿಬ್ಬಂದಿಗಳಿಗೆ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಬೆಂಗಳೂರು, ಶ್ರೀ ಧ. ಮಂ. ಮೆಡಿಕಲ್ ಟ್ರಸ್ಟ್, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಸ್ಪತ್ರೆ, ಉಜಿರೆ, ಕೆ.ಎಸ್. ಹೆಗ್ಡೆ ಆಸ್ಪತ್ರೆ ದೇರಳಕಟ್ಟೆ, ಲಿಂಕ್ ಸಲಹಾ ಕೇಂದ್ರ ಮಂಗಳೂರು, ಎ.ವಿ. ಬಾಳಿಗ ಆಸ್ಪತ್ರೆ ಉಡುಪಿ, ಸಿರಿ ಗ್ರಾಮೋದ್ಯೋಗ ಸಂಸ್ಥೆ (ರಿ.) ಉಜಿರೆ, ಬಾಹ್ಯ ಲೆಕ್ಕಪರಿಶೋಧಕರಾದ ಶ್ರೀ ಪ್ರಕಾಶ್ ಬಾಸ್ರಿಯವರಿಗೂ ನಲ್ಮೆಯ ನಮನಗಳು.

ವಿಪತ್ತು ನಿರ್ವಹಣಾ ಕಾರ್ಯಕ್ರಮದ ಸಂಯೋಜನೆಯಲ್ಲಿ ಮಹತ್ವದ ಸಹಕಾರ ನೀಡಿರುವ ಶ್ರೀ ಜಗದೀಶ್ ಅಡಪ, ಉಷಾ ಫೈರ್ ಎಂಡ್ ಸೇಫ್ಟಿ, ಡಾ| ಮಹೇಂದ್ರ ರಾಜಾರಾಮ್, ಯುನಿಸೆಫ್, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಪ್ರಿನ್ಸಿಪಾಲ್ ಸೆಕ್ರಟರಿ, ಕಾರ್ಯದರ್ಶಿಗಳು, ಸೆಕ್ಷನ್ ಆಫೀಸರ್ಸ್ ಮತ್ತು ಎನ್‌ಡಿಆರ್‌ಎಫ್, ಎಸ್‌ಡಿಆರ್‌ಆಫ್, ಜಿಲ್ಲಾಡಳಿತ, ಜನಪ್ರತಿನಿಧಿಗಳು, ಅಗ್ನಿಶಾಮಕದಳ, ಪೋಲೀಸ್ ಇಲಾಖೆ, ಅರಣ್ಯ ಇಲಾಖೆ, ಇಂಧನ ಇಲಾಖೆ, ಆರೋಗ್ಯ ಇಲಾಖೆ, ಜಿಲ್ಲಾ ವಿಪತ್ತು ನಿರ್ವಹಣಾ ಕೋಶದ ಎಲ್ಲಾ ಜಿಲ್ಲಾ ಘಟಕಗಳಿಗೆ, ತರಬೇತು ಪಡೆದ ಮಾಸ್ಟರ್, ಕ್ಯಾಪ್ಟನ್, ಕೋರ್ ಕಮಿಟಿ, ಘಟಕ ಪ್ರತಿನಿಧಿ, ಸಂಯೋಜಕರು, ಸ್ವಯಂಸೇವಕರಿಗೆ ಪ್ರೀತಿಪೂರ್ವಕ ಧನ್ಯವಾದಗಳು.

**ಅಧ್ಯಕ್ಷರು/ಕಾರ್ಯದರ್ಶಿ**

ಸುರೇಂದ್ರ ಮ್ಯಾನ್ಷನ್ ಕಟ್ಟಡ, 1ನೇ ಮಹಡಿ, ಕೆನರಾ ಬ್ಯಾಂಕ್ ಬಳಿ, ಮುಖ್ಯರಸ್ತೆ ಬೆಳ್ತಂಗಡಿ, ದ.ಕ. ಜಿಲ್ಲೆ-574 214.
Phone: 08256-232133, 9448468332, 9611581332.
Email: janajagruthi@skdrdpindia.org,
Janajagruthi Website: http://dharmasthaladrc.com,
Shaurya Website: skdrdpdisastermanagement.org,
Facebook: Skdrdp Janajagrati and showrya program

❖❖❖